ಮೈಸೂರ ಗೆಜೆಟ್.

ನಂ. 32 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1885.

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 8, ಸನ್ 1885.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜ್‌ಯವರು, ಸರ್ವೆ ವ ಇನಾಂ ಸೂಪರ್ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ ವರ್ಕಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇರ್ಡ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೆ ಬಕಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ಸ್ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಅಕ್ಟ್ಸುಗಳು ವ ರೆಗ್ಯುಲೇಷನ್ಸುಗಳು.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 11ನೇ ಜುಲೈ 1885.

ಕ್ಯಾಂಪ್ ನಂ. 773.—ಕಡೂರು ತಾಲ್ಲೂಕಿನಲ್ಲಿರುವ ಈಸುವನಹಳ್ಳಿ ಗ್ರಾಮವು ಜಾಲ್ತಿ ಸರಕಾರಸಾಲ್ ಲಾಗಾಯತು, ಆರೇಕೆರೆ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುತ್ತೆ.

ತಾರೀಖು 17ನೇ ಜುಲೈ 1885.

ನಂ. 73.—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಇದರಡೀ ಕಂಡ ಗ್ರಾಮಗಳ ವರ್ಗಾವರ್ಗಿಯು ಮಂಜೂರ್ಮಾಡಲ್ಪಟ್ಟಿದೆ:—

ಡಿಫ್ಲಫೆಟ್ಟದ ತಾಲ್ಲೂಕಿನಿಂದ ಕೋಲಾರ ತಾಲ್ಲೂಕಿಗೆ.

1 ಕಾಡಪಳ್ಳಿ | 2 ಗುರುಜನಹಟ್ಟ

ತಾರೀಖು 16ನೇ ಜುಲೈ 1885.

ನಂ. 75.—ಸ.ಕ್ರ 1879ನೇ ಇಸವಿಯ ಇಂಡಿಯನ್ ಸ್ಟ್ಯಾಂಪ್ ಆಕ್ಟಿನ 8ನೇ ಸೆಕ್ಷನ್‌ನಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಶ್ರೀಮಂತ ಮಹಾರಾಜಾ ಸರ್ಕಾರವರು ಹುಕ್ಕುಂ ಮಾಡುವದೇನಂದರೆ, ಬಂದು ಫಸಲಿನ ಯಾವ ಆಧಾರದ ಮೇಲಾಗಲಿ ಕೊಡಲ್ಪಟ್ಟ ಸಾಲವು ವಾಪಸು ಮಾಡುವ ಬಗ್ಗೆ ಹುಟ್ಟಿದ ಬಂದು ಬಡಂಬಡಿಕೆ ದಸ್ತಾವೇಜಿನ ಮೇಲೆ ವಸೂಲ್ಮಾಡಲ್ಪಡಬೇಕಾದ ಸ್ಟ್ಯಾಂಪು ಡ್ಯೂಟಿಯು, ಸದರೀ ಫಸಲು ಆಧಾರ ಕಾಲದಲ್ಲಿ ಇದ್ದಾಗ್ಯೂ ಅಥವಾ ಇಲ್ಲದಿದ್ದಾಗ್ಯೂ ಸರಿಯೆ, ಸದರೀ ಆಕ್ಟಿನ 1ನೇ ಷೆಡ್ಯೂಲಿನ 29ನೇ ಆರ್ಟಿಕಲ್ಲಿನ (*a*) ಅಥವಾ (*b*) ಕ್ಲಾಜಿನಲ್ಲಿ ನಮೂದುಮಾಡಲ್ಪಟ್ಟ ಕಾಲದವಳಗಾಗಿ ಸದರೀ ಸಾಲವು ಪಾವತೀ ಮಾಡಲ್ಪಡುವದಾದ ಪಕ್ಷದಲ್ಲಿ, ಸದರೀ ಆರ್ಟಿಕಲ್ಲಿನ ಸಂದರ್ಭಾನುಸಾರ (*a*) ಯಾ (*b*) ಕ್ಲಾಜು ಅನುಸರಿಸಿ ವಸೂಲ್ಮಾಡಲ್ಪಡಬೇಕಾದ ಡ್ಯೂಟಿಯನ್ನು ವಿಾರಕೂಡದು.

ತಾರೀಖು 22ನೇ ಜುಲೈ 1885.

ನಂ. 83.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೀಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ನಮೂಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮಗಳು ಇದರಡೀಕಂಡ ತಖ್ತೀಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು, ಮತ್ತು ಸದರೀ ತಾರೀಖಿನಲ್ಲಿ ಬಿಳಿಗ್ಯೆ 11 ಘಂಟೆಗೆ ಹರಾಜು ಘುಮಾವಾಗಿ, ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು, ತಮ್ಮ ಯಜ್ಞಾಸ್ತೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ ವೈಕೀ ಕೀಕಡಾ 25ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ವೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಂದೋ ಎಂಬುವನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಆವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ ಬಡ್ಡೀ ವ ಇತರ ಖರ್ಚುಗಳು ದೇಖರೇಖ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮೆವ್ಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮವ್ವ ಆತನ ಸುಧರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಸಾದ ಬಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬಿಜವರೀ ವಿಷಯದಲ್ಲಾಗಲಿ ಇರುವ ಸಲ್ಲತ್‌ಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲಿನಲ್ಲಿ ಆಗುವ ಆಜ್ಞೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ಜಿಲ್ಲೆಯ ತಾಲ್ಲೂಕಿನ ಹೋಬಳಿಯ.	ಗ್ರಾಮಗಳು.	ಜೋಡೀದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಹುಟ್ಟುವಳಿಯ ಯಾ ಬೆಲೆಯ.	ಸರ್ಕಾರಕ್ಕೆ ಕೊಡಬೇಕಾದ ಕಿಸ್ತಿಯ.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೊ ಅಂಥಾ ಸರಕಾರದಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಬೆಂಗಳೂರು. ಬೆಂಗಳೂರು.	ಜಾಲ	ಜೋಡಿಬಾ ಗಲೇಟಿ	ಕುಳ್ಳಪ್ಪ ವೆರ ಪಿ. ಕೃಷ್ಣಪ್ಪ ರಾರು ಇತರ ಇಬ್ಬರು	ಎ. ಸುಂ. ಗ. 41 17 12	ರೂ. ಆ. ಪೈ. 252 1 2	ರೂ. ಆ. ಪೈ. 246 8 0	ರೂ. ಆ. ಪೈ. 497 7 11	1885ನೇ ಇಸವಿ ಆಗಸ್ಟ್ 28ನೇ ಮಕ್ಕಂನ ಬೆಂಗಳೂರು ತಾಲ್ಲೂಕು ಕಚ್ಚೇರಿಯೊಳಗೆ ಅಮಲ್ದಾರ್ರ ರೂಬರು.
		ಜೋಡಿ ದಾಸನಾಯಕನಹಳ್ಳಿ	ಮಾರೇನಹಳ್ಳಿ ದಿವಾಕರಪ್ಪ, ಇತರ 50ಮಂದಿ	28 18 11½	56 0 0	51 4 0	211 15 3	ಡಿಟೋ 29ನೇ ಡಿಟೋ.

ತಾರೀಖು 27ನೇ ಜುಲೈ 1885.

ನಂ. 88.—ಗವರ್ನಮೆಂಟ್ ಜೋಟೂನಿಕಲ್ ಗಾರ್ಡನ್ಸ್ ಸೂಪರಿಂಟೆಂಡೆಂಟ್ ಮೆ|| ಜೆ. ಕ್ಯಾಮಿರ್ಯನವರಿಗೆ 1885ನೇ ಇಸವಿ ಜುಲೈ 17ನೇ ಮಕ್ಕಂ 74ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ಪ್ರಿವಿಲೀಜ್ ರಜಾ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 29ನೇ ಜುಲೈ 1885.

ನಂ. 89.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲುತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತ್ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡೀಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು, ಮತ್ತು ಸದರೀ ತಾರೀಖಿನಲ್ಲಿ ಬೆಗ್ಯೆ 11 ಘಂಟೆಗೆ ಹರಾಜು ಶುರುವಾಗಿ, ಉಳಿಕೆಯೊವೆದೂ ಇಲ್ಲದೆ ಗ್ರಾಮವು ಚಚ ದರಖಾಸ್ತುದಾರರಿಗೆ ಹರಾಜೆ ನಿಲ್ಲುವದು.

2. ಪರಂತು, ಒಂದು ಗ್ರಾಮವು ಜೇರೆಜೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಸಬ್ ಡಿವೀಜ್ಞ ಆಫೀಸರರು ತಮ್ಮ ಯಬ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಜೇರೆಜೇರೆಯಾಗಿ ಹರಾಜು ಹಾಕಿಸುವರು

3. ಕ್ರಯದಾರನು ಹರಾಜೆ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಆಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ, ಜಮೀನು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳೆ ಹರಾಜು ಹಾಕಲ್ಪಡುವದು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮ.ತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಐಬೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ

ಹಾಜರ ಮಾಡಿದರೆ, ಹರಾಜು ಮನ್ಸುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯವೂದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಪೂರ್ಣಲಗನ್ನು ಪೂರ್ತಿಯಾಗಿ ಜಾವತೀ ಪಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಧರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವೀಜ್ಞ ಆಫೀಸರರಿಂದ ರುಜು ಪೊಪರ್ ಮಾಡೋಣವ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪೀಲನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲತ್‌ಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತ ಎನಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲನಲ್ಲಿ ಆಗುವ ಆಬ್ಜೆಕ್ಟ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ಡಿಸ್ಟ್ರಿಕ್ಟ್.	ತಾಲ್ಲೂಕ್.	ಹೋಬ್ಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೊ ಅಂಥಾ ಸರಕಾರದ ಕಂದಾಯದ ಬಾಕಿ.			ಹರಾಜು ದಸ್ತೂರಿ.
					ಎ. ಗುಂ. ಗ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.			
ಈಜೂರು—ಹಾಸನ ಸಬ್ ಡಿವೀಜ್.	ಬೇಲೂರು.	ಅಬ್ಬೇಹಳ್ಳಿ.	ಜೋಡಿ ಹುಲ್ಲೋಡೆ.	ಬಂದಪ್ಪಯ್ಯ, ಇತರ 13ಮಂದಿ	288 14 0	452 8 0	153 12 0	20 11 4	1879—80	1885ನೇ ಇಸವಿ ಜುಲೈ ತಿಂಗಳ ಕೊನೇ ವಾರದಲ್ಲಿ ಬೆಂಗಳೂರಿನಲ್ಲಿ ಜನಮಂದಾರಿಯಲ್ಲಿ ಹರಾಜು ಮಾಡಿಸಲಾಗುವದು.	
								70 4 4	1880—81		
								8 11 3	1881—82		
								3 7 6	1882—83		
								209 12 7	1883—84		
								153 12 0	1884—85		
								4 15 4	ಬಾಂದಲಾಗವಡು		
								471 10 4			

ಈ ಗ್ರಾಮದ ಬೇರಿಜು ಮಾಜಿ ದರದ ಪ್ರಕಾರ ಇದೆ.

ತಾರೀಖು 30ನೇ ಜುಲೈ 1885.

ನಂ. 90.—ಬೆಂಗಳೂರು ಅಮಲ್ದಾರ್ ಬಿ. ಸೀತಾರಾಮಯ್ಯನವರು ಇನ್ನೊಂದು ಹುಕ್ಕುಂ ಕೊಡುವವರೆಗೂ, ಕೋಲಾರ್‌ಪೇಟೆ ಸ್ಟೇಷನ್ ಬೌರಿಂಗ್‌ಪೇಟೆ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟ್ಯ ಮಾಡುವಂತೆ ಮೊಕರರ್ರಾಮಲ್ಪಟ್ಟಿರುತ್ತಾರೆ.

ನಂ. 91.—ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಪಿ. ಯಸ್. ಪೂರ್ಣಯ್ಯ ಬಿ. ಎ. ಯವರು, 1885ನೇ ಇಸವಿ ಜುಲೈ 27ನೇ ಮಕ್ಕುಂ ಮಧ್ಯಾನ್ಹಾತ್ಪೂರ್ವ ಬೆಂಗಳೂರು ಟರ್ಸ್ ಮಾಜಿಸ್ಟ್ರೇಟ್ ಕೋರ್ಟಿನ ಚಾರ್ಜನ್ನು ಅಸಿಸ್ಟೆಂಟ್ ಕಮ್ಮಿಷನರ್ ಖಾ|| ಬಹದೂರ್ ಮಹಮ್ಮದ್ ಅಲ್ಲಿಯವರಿಗೆ ವಪ್ಪಿಸಿರುತ್ತಾರೆ.

ತಾರೀಖು 31ನೆ ಜುಲೈ 1885.

ನಂ. 93.—ಸ್ಯ 1885ನೇ ಇಸವಿ ಜುಲೈ 22ನೇ ಮಕ್ಕುಂ 78ನೇ ನಂಬರ್ ಇಸ್ತಹಾರ್‌ನಾಮೆಯಲ್ಲಿ "ಬೆಂಗಳೂರು ಡಿಸ್ಟ್ರಿಕ್ಟಿನ" ಎಂಬ ಮಾತುಗಳಿಗೆ ಬದಲಾಗಿ "ಬೆಂಗಳೂರು, ಹೊಸಕೋಟೆ, ಆನೇಕಲ್, ಕಾನಕಾನಹಳ್ಳಿ ಮತ್ತು ಕ್ಲೋಸ್‌ಪೇಟೆ ತಾಲ್ಲೂಕುಗಳ" ಎಂದು ಓದಿಕೊಳ್ಳತಕ್ಕದ್ದು.

ಬವೋಜೇಬ್ ಹುಕ್ಕುಂ,

ವಿ. ಪಿ. ಮಾಧವರಾವ್,

ಆ|| ಸೆಕ್ರಟೇರಿ.